7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ :- ಮೀಸಲಾತಿ ಆಧಾರದ ಮೇಲೆ ಬಡ್ತಿಗೆ ಸಂಬಂಧಪಟ್ಟಂತೆ ಮಸೂದೆ ಅಂಗೀಕರಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಶೂನ್ಯವೇಳೆಯಲ್ಲಿ ಶ್ರೀ ಚಿಕ್ಕನಗೌಡ್ರ ಹಾಗೂ ಶ್ರೀ ಅಶೋಕ್ ಅವರು ಪ್ರಸ್ತಾಪ ಮಾಡುತ್ತಾರೆ. ನಂತರ ನಾನು ಮಾತನಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ಒಂದು ಮೀಸಲಾತಿ ಆಧಾರದ ಮೇಲೆ ಬಡ್ತಿ, ಇದು ಮೇಲ್ಮನೆಯಲ್ಲಿ ಪಾಸ್ ಆಗಿ ಬಂದಿರತಕ್ಕಂತಾದ್ದು. ಆ ಬಿಲ್ ಪಾಸ್ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್ :- ಅದಕ್ಕೆ ಏನು ಚರ್ಚೆ ಬೇಡವೆ? ಅದರ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಇದನ್ನು ಕನ್ಸಿಡರೇಷನ್‌ಗೆ ಇಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :- ಅದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗುತ್ತದೆ.

(ಅ) ಕಾಯಿದೆ ಪುಸ್ತಕಗಳನ್ನು ಕನ್ನಡದಲ್ಲಿ ಮುದ್ರಿಸುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಾರುಕಟ್ಟೆ ಸಮಿತಿ ಬೆಲೆ ಮಂಡಿಸಿದ್ದಾರೆ. ಆದರೆ ಲೈಬ್ರರಿಯಲ್ಲಿ ಕನ್ನಡ ಕಾಯಿದೆ ಪುಸ್ತಕ ಇಲ್ಲ. ಬರೀ ಇಂಗ್ಲೀಷ್ ಪುಸ್ತಕವನ್ನು ಇಟ್ಟುಕೊಂಡಿದ್ದಾರೆ. ನಾನು ನಿನ್ನೆಯಿಂದ ಹುಡುಕಿಸುತ್ತಿದ್ದೇನೆ. ಕನ್ನಡದ ಪ್ರತಿ ಇಲ್ಲವೇ ಇಲ್ಲ. ಬರೀ ಇಂಗ್ಲೀಷ್ ಪ್ರತಿ ಇರುವುದು ಹೀಗಾದರೆ ಹೇಗೆ ಮಾಡುವುದು?

ಅಧ್ಯಕ್ಷರು :- ಅಲ್ಲ, ಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಎಷ್ಟು ಸಲ ಹೇಳುವುದು? ಕನ್ನಡದಲ್ಲಿ ಪುಸ್ತಕಗಳು ಇಲ್ಲ, ಕನ್ನಡದಲ್ಲಿ ಮಾಡಿಸಿ ಎಂದು. ಆ ಕಾಯಿದೆ ಪುಸ್ತಕವನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿಸಿ.

ಶ್ರೀ ಎಸ್.ಎಸ್. ಪಾಟೀಲ್ :- ಕನ್ನಡ ಪುಸ್ತಕ ಇಲ್ಲವೇ ಇಲ್ಲ. ಲೈಬ್ರರಿಯಲ್ಲಿ ಕನ್ನಡ ಪುಸ್ತಕ ಇಲ್ಲ.

ಶ್ರೀ ಬಿ.ಎಸ್. ಪಾಟೀಲ್ (ಶಾಸನೂರ್) :- ಈಗಾಗಲೇ ನಾವು ಎಲ್ಲಾ ಪ್ರತಿಗಳನ್ನು ಕೊಟ್ಟಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :- ನನಗೆ ಪೂರ್ಣ ಕಾಯಿದೆ ಬೇಕು. ಬೆಳಿಗ್ಗೆಯಿಂದ ಕೇಳುತ್ತಿದ್ದೇನೆ, ಇಂಗ್ಲೀಷ್ ಪ್ರತಿ ಇದೆ. ಕನ್ನಡದಲ್ಲಿ ಇಲ್ಲ. ತಾವು ನಗಬೇಡಿ, ಇದು ಗಂಭೀರವಾದ ವಿಚಾರ.

ಶ್ರೀ ಡಿ.ಬಿ. ಚಂದ್ರೇಗೌಡ :- ಈ ಸದನದಲ್ಲಿ ಇಟ್ಟಿದ್ದೇವೆ. ಲೈಬ್ರರಿಯಲ್ಲಿ ಇಲ್ಲ, ಇನ್ನೊಂದು ಕಡೆ ಇಲ್ಲ ಎಂದರೆ ನಾವು ಸರ್ಕಾರದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದೇವೆ.

ಅಧ್ಯಕ್ಷರು :- ಮಾನ್ಯ ಸದಸ್ಯರಿಗೆ ಒಂದು ಇಂಗ್ಲಿಷ್ ಕಾಪಿ, ಒಂದು ಕನ್ನಡ ಕಾಪಿ ಎರಡನ್ನೂ ಕೊಡುತ್ತಾರೆ.